ಇ) ತಜ್ಞ ವೈದ್ಯರನ್ನು ನೇಮಿಸದೆ ಇರುವ ಸಮುದಾಯ ಆರೋಗ್ಯ ಕೇಂದ್ರಗಳು ಎಷ್ಟು; ತಜ್ಞ ವೈದ್ಯರ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 2010–11ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಯಾವುದೇ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹೊಸದಾಗಿ ಪ್ರಾರಂಭಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ದೇವರ ಹಿಪ್ಪರಗಿ ಮತ್ತು ಹೂವಿನ ಹಿಪ್ಪರಗಿ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದು

168 (359) ಶ್ರೀ ಎ. ಎಸ್. ಪಾಟೀಲ್ (ದೇವರ ಹಿಪ್ಪರಗಿ): ಮಾನ್ಯ ಒಳಾಡಳಿತ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯ ದೇವರ ಹಿಪ್ಪರ್ಗಿ ಮತ್ತು ಹೂವಿನ ಹಿಪ್ಪರ್ಗಿ ಬಸ್ ನಿಲ್ದಾಣಗಳು ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಮೇಲ್ದರ್ಜೆಗೇರಿಸಿದ್ದಲ್ಲಿ ಎಷ್ಟು ಹಣ ಮಂಜೂರಾಗಿದೆ. ಸದರಿ ಹಣದಲ್ಲಿ ಯಾವ ಯಾವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು;

ಇ) ಹೂವಿನ ಹಿಪ್ಪರ್ಗಿ ಬಸ್ ನಿಲ್ದಾಣ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದೆಯೇ;

ಈ) ಇತ್ಯರ್ಥವಾಗಿದ್ದಲ್ಲಿ ನ್ಯಾಯಾಲಯ ಯಾವ ತೀರ್ಪು ನೀಡಿದೆ ಮತ್ತು ಯಾವಾಗ ನೀಡಿದೆ;

ಉ) ತೀರ್ಪು ನೀಡಿದ ನಂತರ ಸದರಿ ಬಸ್ ನಿಲ್ದಾಣದಲ್ಲಿ ಅಬಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆಯೇ?

ಶ್ರೀ ಆರ್. ಅಶೋಕ್ (ಒಳಾಡಳಿತ ಮತ್ತು ಸಾರಿಗೆ ಸಚಿವರು):

ಅ) ಹೌದು, ಈ ಬಸ್ ನಿಲ್ದಾಣಗಳನ್ನು ಭಾಗಶಃ ಮೇಲ್ದರ್ಜೆಗೇರಿಸಲಾಗಿದೆ.

ಆ) ದೇವರಹಿಪ್ಪರಗಿ ಹಾಗೂ ಹೂವಿನಹಿಪ್ಪರಗಿ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಒಟ್ಟಾರೆಯಾಗಿ ರೂ.25.38 ಲಕ್ಷಗಳಷ್ಟು ಮೊತ್ತ ಮಂಜೂರಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

ದೇವರ ಹಿಪ್ಪರಗಿ ಬಸ್ ನಿಲ್ದಾಣ

ಕ್ರ.ಸಂ.	ಕೆಲಸದ ವಿವರ	ಮಂಜೂರಾದ ಮತ್ತು ಖರ್ಚಾದ ಮೊತ್ತ (ಲಕ್ಷ ರೂ. ಗಳಲ್ಲಿ)	ಷರಾ
1	ಬಸ್ ನಿಲ್ದಾಣಕ್ಕೆ ಡಾಂಬರೀಕರಣ ಮಾಡುವುದು	14.32	ಕೆಲಸ ಪೂರ್ಣಗೊಂಡಿದೆ
2	ಬಸ್ ನಿಲ್ದಾಣದ ಮುಚ್ಚಳ ಹೊದಿಕೆಗೆ ಮೆಟಾಕಲರ್ ಶೀಟ್ ಛಾವಣಿ ಅಳವಡಿಸುವುದು	2.64	ಕೆಲಸ ಪೂರ್ಣಗೊಂಡಿದೆ
3	ಬಸ್ ನಿಲ್ದಾಣದ ಮುಂಭಾಗದ ಆವರಣದ ಗೋಡೆ ನಿರ್ಮಿಸುವುದು ಹಾಗೂ ಇತರೆ ಅಭಿವೃದ್ಧಿ ಕೆಲಸಗಳು	2.96	ಕೆಲಸ ಪೂರ್ಣಗೊಂಡಿದೆ
	ಒಟ್ಟು	**19.92**	

ಹೂವಿನ ಹಿಪ್ಪರ್ಗಿ ಬಸ್ ನಿಲ್ದಾಣ

ಕ್ರ. ಸಂ.	ಕೆಲಸದ ವಿವರ	ಮಂಜೂರಾದ ಮೊತ್ತ (ಲಕ್ಷ ರೂ.ಗಳಲ್ಲಿ)	ಷರಾ
1	ಬಸ್ ನಿಲ್ದಾಣದ ಆವರಣ ಗೋಡೆ ನಿರ್ಮಿಸುವುದು	4.70	ಕೆಲಸ ಪ್ರಗತಿಯಲ್ಲಿದೆ
2	ಬಸ್ ನಿಲ್ದಾಣದ ಆವರಣ ವಿದ್ಯುತ್ ಕೆಲಸಗಳು	0.76	ಕೆಲಸ ಪ್ರಗತಿಯಲ್ಲದೆ
	ಒಟ್ಟು	**5.46**	

ಇ) ಹೂವಿನ ಹಿಪ್ಪರ್ಗಿ ಬಸ್ ನಿಲ್ದಾಣದ ಪ್ರಕರಣವು ಜೆ.ಎಂ.ಎಫ್.ಸಿ. ಬಸವನಬಾಗೇವಾಡಿ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುತ್ತದೆ.

ಈ) ಸದರಿ ಪ್ರಕರಣ ಸಂಖ್ಯೆ ಓ.ಎಸ್. 169/1993 ದಿನಾಂಕ: 10-07-2009ರಂದು ಸಂಸ್ಥೆಯ ಪರವಾಗಿ ಮಾನ್ಯ ನ್ಯಾಯಾಲಯದಲ್ಲಿ ತೀರ್ಪು ಪ್ರಕಟವಾಗಿರುತ್ತದೆ.

ಈ ಪ್ರಕರಣದಲ್ಲಿ ಅರ್ಜಿದಾರರು ಮೇಲ್ಮನವಿ ದಾಖಲಿಸಿದ್ದು, ಆರ್‌ಎ25/09ರಡಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಬಾಕಿಯಿರುತ್ತದೆ.

ಉ) ಹೌದು, ಹೂವಿನ ಹಿಪ್ಪರ್ಗಿ ಬಸ್ ನಿಲ್ದಾಣದ ಆವರಣ ಗೋಡೆ ನಿರ್ಮಿಸುವುದಕ್ಕೆ ರೂ.4.70ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದ್ದು, ಈಗಾಗಲೇ ರೂ.3.70 ಲಕ್ಷಗಳಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಮುಂದುವರೆದು ಬಸ್ ನಿಲ್ದಾಣದ ವಿದ್ಯುತ್‌ಕರಣ ಕಾಮಗಾರಿಗೆ 0.76 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವ ವಿಚಾರ ಕುರಿತು

172(345): ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಯಾವ ಹಂತದಲ್ಲಿದೆ; (ಜಿಲ್ಲಾವಾರು ವಿವರ ನೀಡುವುದು);

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಉ) ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ: 11-1-2011ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ.

ದಲಿತರ ರಕ್ಷಣೆ

176 (458) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್): ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಣಿಗಲ್ ತಾಲ್ಲೂಕಿನಲ್ಲಿ ಅಸ್ಪೃಶ್ಯತೆ ದೌರ್ಜನ್ಯಕ್ಕೆ ಬಲಿಯಾಗುವ ದಲಿತರ ರಕ್ಷಣೆ ಮಾಡುವ ಸಲುವಾಗಿ ಪ್ರತಿ ಗ್ರಾಮಗಳವಾರು ದಲಿತ